ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 78-85
©*IIMRD*, Mysuru
IIMRD JOURNALS
www.iimrd.com

# ಹೆಳವರ ಚಾರಿತ್ರಿಕ ಬೆಳವಣಿಗೆ: ಒಂದು ಅವಲೋಕನ

**ಡಾ.ಶಶಿಕುಮಾರ್ ವಿ**
ಬೆಂಗಳೂರು

**ಸಾರಾಂಶ: (Abstract)**

*ಕರ್ನಾಟಕದ ಸೊಗಡು ಮತ್ತು ಸಂಸ್ಕೃತಿಗೆ ಕೆಲವೊಂದು ಬುಡಕಟ್ಟು ಅಲೆಮಾರಿ ಜನಾಂಗಗಳು ತಮ್ಮದೇ ಆದ ಕೊಡುಗೆಯನ್ನು ನೀಡಿ ತಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಅನೇಕ ಶತಮಾನಗಳಿಂದ ಬೆಟ್ಟ–ಗುಡ್ಡಗಳಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆಮಾರಿಗಳಾಗಿ ವಾಸಿಸುತ್ತಾ ಬಹುಕಾಲದವರೆಗೆ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಉಳಿಸಿಕೊಂಡು ಬಂದಿರುವ ಸಮುದಾಯಗಳಲ್ಲಿ ಹೆಳವ ಸಮುದಾಯವು ಒಂದು. ಪ್ರಸ್ತುತ ಲೇಖನದಲ್ಲಿ ಹೆಳವರ ಚಾರಿತ್ರಿಕ ಬೆಳವಣಿಗೆ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಅಲೆಮಾರಿ ಸಮುದಾಯ, ಹೆಳವ, ಸಾಂಸ್ಕೃತಿಕ ಇತಿಹಾಸ, ಚಾರಿತ್ರಿಕ ಬೆಳವಣಿಗೆ.*

**ಪೀಠಿಕೆ**

ಪ್ರಾಚೀನ ಕಾಲದಲ್ಲಿ ಅಲೋಕರೆಂಬ ಕವಿಗಳು ರಾಜರ ಆಸ್ಥಾನದಲ್ಲಿದ್ದು, ಇವರನ್ನು 'ಹೊಗಳು ಭಟ್ಟರು' ಎಂದು ತಮ್ಮ ಆಶ್ರಯದಾತರನ್ನು ಹೊಗಳಲು ಬಳಸುವ ಹೊಗಳಿಕೆಯ ಅತಿಶಯೋಕ್ತಿಯ ಮಾತು ಎಂಬಂತೆ ಹೆಳವರು ಒಂದು ಪ್ರದೇಶದ[1] ಒಂದು ಜನಾಂಗದ ಅಥವಾ ಒಂದು ನಾಡಿನ ಭವ್ಯ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಪರಂಪರೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಇವರು ಗತಕಾಲ ಮತ್ತು ಇತಿಹಾಸವನ್ನು ಆ ಅವಧಿಯಲ್ಲಿನ ತನ್ನ ಪೂರ್ವಜರ ಸಾಧನೆಯ ಬಗ್ಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಪರ್ಕ ಸೇತುವೆಯಂತೆ, ರಂಜಕರಾಗಿ, ಕಲಾವಿದರಾಗಿ, ಇತಿಹಾಸಕಾರರಾಗಿ, ವ್ಯಾಪಾರಿಗಳಾಗಿ, ಕುಶಲ–ಕರ್ಮಿಗಳಾಗಿ ದುಡಿದಿದ್ದಾರೆ.

ಈ ಜನಾಂಗವು ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದ್ದು, ಯಾರ ಗಮನಕ್ಕೂ ಬಾರದಂತೆ ಮರೆಮಾಚಿರುವ ಅಲೆಮಾರಿ ಸಮುದಾಯವಾಗಿದೆ.

---

[1] ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಭಗವತ್ ಶರಣ ಉಪಾಧ್ಯಾಯ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, 1986, ಪುಟ ಸಂಖ್ಯೆ 16.)

*Please cite this article as:* ಶಶಿಕುಮಾರ್, ವಿ. (2025). ಹೆಳವರ ಚಾರಿತ್ರಿಕ ಬೆಳವಣಿಗೆ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 78–85

ಕರ್ನಾಟಕದಲ್ಲಿ ಸಂವಿಧಾನ ಬದ್ಧವಾಗಿ ಒಟ್ಟು 50 ಬುಡಕಟ್ಟುಗಳಿವೆ. ಉಳಿದಂತೆ ಕೆಲವು ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳು. (Nomadic Tribes) ಮತ್ತು ಅರೆ ಅಲೆಮಾರಿ ಬುಡಕಟ್ಟುಗಳು (Semi Namedic Tribes) ಎಂದು ಕರೆಯಲಾಗಿದೆ. ಇವುಗಳಲ್ಲಿ ಹೆಳವರು ಹಿಂದುಳಿದ ಬುಡಕಟ್ಟುಗಳ ಅಲೆಮಾರಿ–ಅರೆಮಾರಿಗಳಲ್ಲಿ ಒಳಗೊಂಡಂತೆ ಗೊಲ್ಲರು, (ಗೌಳಿಗಳು) ಹರಿಣಶಿಕಾರಿಗಳು, ಕೊರವರು ಮತ್ತು ಪಾರ್ಧಿಗಳು ಇತರರನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

1971ರ ಸೆನ್ಸೆಸ್ ರಿಪೋರ್ಟ್ ಪ್ರಕಾರ ಬೆಂಗಳೂರು ಗ್ರಾಮೀಣ ಪ್ರದೇಶದಲ್ಲಿ–5,758 ಮತ್ತು ಬೆಂಗಳೂರು ನಗರದಲ್ಲಿ– 4,529, ಬುಡಕಟ್ಟು ಜನರನ್ನು ಕಾಣಬಹುದು.[2] ಹೀಗೆ ಭಾರತದ ಉದ್ದಕ್ಕೂ ಅಲೆಮಾರಿ ಸಮುದಾಯಗಳು ಕಂಡುಬರುತ್ತವೆ. ಅವು ಇದ್ದಲ್ಲಿಯೇ ನೆಲಸಬೇಕು ಎನ್ನುವ ಕಟ್ಟುಪಾಡಿಗೆ ಒಳಗಾಗದೇ ತಮ್ಮ ಜೀವನಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಅಲೆದಾಡುತ್ತಲೇ ಇರುತ್ತವೆ. ಇವರು ತಮ್ಮದೇ ಆದ ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿ ಹೊಂದಿರುವ ಇವರು ಭಾರತೀಯ ಸಮಾಜದ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸಿದ್ದಾರೆ.

ಹೀಗೆ ಸಾಮಾಜಿಕ ಸ್ಥಾನಮಾನಗಳಿಂದ ವಂಚಿತವಾದ ಸಮುದಾಯಗಳು ಜಗತ್ತಿನಿಂದ ಅನೇಕ ಅವಮಾನ, ಹಿಂಸೆ, ನೋವು, ಅಸಹಾಯಕತೆಗಲ್ಲೂ ಅಕ್ಷರ ಜಗತ್ತಿನಿಂದ ದೂರ ಉಳಿದು ಮೌಖಿಕವಾಗಿ ಸೃಷ್ಟಿಯಾದ ಕಾವ್ಯಗಳ ರಚನೆ ಈ ಪರಂಪರೆಯಾಗಿ ಉಳಿದಿವೆ. ಕೆಲವು ಸಮುದಾಯಗಳು ಜನಪದರಾಗಿ ಗತವನ್ನು ಕಟ್ಟಿಕೊಳ್ಳುವ ಪ್ರಜ್ಞೆ, ಚರಿತ್ರೆ, ಪುರಾಣ, ಐತಿಹ್ಯ, ಕಲ್ಪನೆಯ ವಿವರಗಳನ್ನೇ ದಾಖಲಿಸುತ್ತಾರೆ. ಇಂತಹದನ್ನು ಹೆಳವ ಸಮುದಾಯವು ಮಾಡಿದೆ. ಜನಪದ ಕಾವ್ಯಗಳಲ್ಲಿ ಸಮುದಾಯಗಳ ಅಂತಃಸಾಕ್ಷಿ ಆಡಗಿರುವಂತೆಯೇ ಆಯಾ ಸಮುದಾಯಗಳ ಅನೇಕ ತಲೆಮಾರುಗಳ ಸ್ಮೃತಿ ರೂಪಕ, ಪ್ರತಿಭೆ, ಸಂಕೇತ ಹಾಗೂ ಧ್ವನಿ ಮತ್ತು ಆಶಯಗಳಲ್ಲಿ ಕಾಣಿಸಿಕೊಂಡಿರುತ್ತದೆ.

**ಹೆಳವ ಚಾರಿತ್ರಿಕ ಹಿನ್ನೆಲೆ**

ಭಾರತ ದೇಶವು ವಿವಿಧ ಜನ ಸಮುದಾಯಗಳು ಮತ್ತು ಬುಡಕಟ್ಟುಗಳಿಂದ ಕೂಡಿದ್ದು, ಇವು ವಿವಿಧ ಸಂಸ್ಕೃತಿಯ ಮತ್ತು ಉಪಸಂಸ್ಕೃತಿಗಳನ್ನು ಹೊಂದಿದ್ದು, ನೂರಾರು ಕುಲವೃತ್ತಿಗಳನ್ನು ತನ್ನೊಡಲಲ್ಲಿ ಅಡಗಿಸಿಕೊಂಡಿರುವ ವೈವಿಧ್ಯಮಯ ದೇಶ. ಇಲ್ಲಿನ ಒಂದೊಂದು ಸಮುದಾಯವು ಒಂದೊಂದು ರೀತಿಯ ಸಮಾಜದ ಬೆಳವಣಿಗೆ ಪೂರಕವಾಗಿವೆ. ಹೀಗೆ ತಮ್ಮ ಪ್ರತ್ಯೇಕತೆ ಮತ್ತು ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿವೆ. ಇಂತಹ ಸಮುದಾಯಗಳಲ್ಲಿ ಹೆಳವರು ಒಂದು ಅತ್ಯಂತ ಪ್ರಾಚೀನ ಮತ್ತು ವಿಶಿಷ್ಟ ಜನಾಂಗವಾಗಿದೆ. ಕರ್ನಾಟಕದ 'ಜನಪದ ವೃಂದಗಳಲ್ಲಿ[3] ಹೆಳವರದು ಒಂದು ವಿಶೇಷ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಕುಲಕಸುಬನ್ನು ಹೊಂದಿದ್ದು, ವಿವಿಧ ಪ್ರದೇಶದ ಪ್ರಭಾವಶಾಲಿ ಮನೆತನಗಳ

[2] ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ–3, ಸೂರ್ಯನಾಥ ಯು. ಕಾಮತ್ ಕರ್ನಾಟಕ ಸರ್ಕಾರ, ಸೆನ್ಸೆಸ್ ಆಫ್ ಇಂಡಿಯಾ , ಜನರಲ್ ರಿಪೋರ್ಟ್ . ಭಾಗ 1 ಎ, ಸಂಪುಟ11,ಬೆಂಗಳೂರು–1971, ಪುಟ ಸಂಖ್ಯೆ 362.)

[3] ಹರಿಲಾಲ್ ಕೆ ಪವಾರ್ ಹೆಳವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993, ಪುಟ ಸಂಖ್ಯೆ 5.)

ವಂಶಾವಳಿಗಳನ್ನು ತಮ್ಮ ಮೌಖಿಕ ಪರಂಪರೆಯ ಮೂಲಕ ಹೇಳುತ್ತಾ, ನಂತರದ ದಿನಗಳಲ್ಲಿ ಅವುಗಳನ್ನು ಚಿಪ್ಪೋಡುಗಳಲ್ಲಿ (ಕಡತಗಳು) ದಾಖಲಿಸಿ, ಕಾಪಾಡಿಕೊಂಡು ಬಂದ ಹಿರಿಮೆ ಇವರದ್ದಾಗಿದ್ದು, ಕುಲಕೊಂಡಾಡುವುದೇ ಇವರ ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಹೀಗೆ ಜನಪದ ಕಲೆಗಳ ಒಂದು ಭಾಗವಾಗಿ ಹೆಳವರ ಗ್ರಾಮಸಂಸ್ಕೃತಿಯ ಆಚರಣೆಗಳು ಮತ್ತು ಅವರ ಮೌಖಿಕ ಪರಂಪರೆಯ ಕಲೆಗಳು ನಮ್ಮ ನಾಡಿನ ಭಾವಲೋಕದ ಅಭಿವ್ಯಕ್ತಿಗಳಾಗಿವೆ. ಅವು ಕೂಡ ಹಾಡಿನ ರೂಪದಲ್ಲಿ ಕಥೆಯ ರೂಪದಲ್ಲಿ ಹೇಳುವ ಇವರ ಕಲೆ ನಿಜಕ್ಕೂ ಕೂಡ ಶ್ಲಾಘನೀಯವಾದದ್ದು, ಹಾಗೆಯೇ ಇವರು ನಮ್ಮ ನಾಡಿನ ಪರಂಪರಾಗತ 'ಜನಪದ ಇತಿಹಾಸಕಾರರೂ', ಕತೆಗಾರರು, ಐತಿಹಾಸಿಕ ಕಾದಂಬರಿಕಾರರು, ಹೌದು ಹಾಗೂ ಒಂದೊಂದು ಮನೆತನಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಬಂದ ಹಿರಿಯರ ಬಿರುದಾವಳಿ, ಪೂರ್ವ ಚರಿತ್ರೆಗಳೆಲ್ಲವನ್ನು ಮನಸೆಳೆಯುವಂತೆ ಹೇಳುವುದರಲ್ಲಿ ಹೆಳವರು ಗಟ್ಟಿಗರಾಗಿದ್ದಾರೆ. ಹೀಗೆ ಹೆಳವರ ಮೂಲ ಕಸುಬಿನಿಂದ ಒಂದು ಕುಟುಂಬದ ವಂಶಾವಳಿಯನ್ನು ತಿಳಿಯಲು, ಪೀಳಿಗೆಯಿಂದ ಪೀಳಿಗೆಗೆ ಆ ವಂಶದ ಇತಿಹಾಸ, ಪರಂಪರೆ, ಹಿನ್ನೆಲೆ ಮತ್ತು ಇತರೆ ಮಾಹಿತಿಗಳು ಇವರಿಂದ ತಿಳಿಯಬಹುದಾಗಿದೆ. ಒಂದು ಕಾಲ ಘಟ್ಟಕ್ಕೆ ಹಲವು ಕುಟುಂಬಗಳ ವಂಶಾವಳಿ ಜ್ಞಾನವನ್ನು ಮಹಾರಾಜರಷ್ಟೆ ಅಲ್ಲದೆ ಗ್ರಾಮೀಣ ಜನಸಾಮಾನ್ಯರು ಕೂಡ ತಮ್ಮ ಪೂರ್ವ ಇತಿಹಾಸವನ್ನು ತಿಳಿಯುವಲ್ಲಿ ಹಾಗೂ ತಮ್ಮ ಮನೆತನಗಳ ದಾಖಲಾತಿ ಕಾಯ್ದಿರಿಸುವಲ್ಲಿ ಹೆಳವರು ಪ್ರಮುಖ ಆಧಾರವಾಗಿದ್ದಾರೆ.

ಹಳ್ಳಿಗಳ ಅಥವಾ ಗ್ರಾಮವೊಂದಕ್ಕೆ ಸಂಬಂಧಿಸಿದಂತೆ ಚಾರಿತ್ರಿಕ ಇತಿಹಾಸಕಾರರಾಗಿರುವ ಹೆಳವರು ಕರ್ನಾಟಕದ ಅಲೆಮಾರಿ–ಅರೆಅಲೆಮಾರಿ ಹಿಂದುಳಿದ ಬುಡಕಟ್ಟು ವ್ಯವಸ್ಥೆಯಲ್ಲಿ ಗುರ್ತಿಸಿಕೊಂಡಿರುವ ಇವರು. ಮೂಲತಃ ಬುಡಕಟ್ಟಿನವರಾಗಿದ್ದು, ಉತ್ತರಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಗಳೆರಡರಲ್ಲೂ ಒಟ್ಟು 27 ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಕ್ರಿ.ಶ. 1981ರ ಭಾರತ ಸರ್ಕಾರದ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಹೆಳವರ ಜನಸಂಖ್ಯೆ, 85,335 ಒಳಗೊಂಡಿರುವ ಸಮುದಾಯವಾಗಿದೆ.[4] ಲೌಕಿಕ ವೃತ್ತಿ ಗಾಯಕ ಪರಂಪರೆಗೆ ಸೇರಿದ ಹೆಳವರು ಗ್ರಾಮೀಣ ಮನೆತನಗಳ ವಂಶಾವಳಿ ದಾಖಲೆ ಬಂಡಾರವಿದ್ದಂತೆ. ಇವರು ಒಕ್ಕಲುಮನೆಗಳ ಕುಲಗಳನ್ನು ಕೊಂಡಾಡುವುದು.[5] ಸತ್ತುಕೆಟ್ಟೋರನ್ನು ಹೊಗಳುವ ಹೆಳವರು, ಒಂದು ಕಾಲಕ್ಕೆ ನಡೆದಾಡುವ ಕಂಪ್ಯೂಟರ್‌ಗಳಂತೆ ಪುಸ್ತಕಗಳನ್ನು ತಲೆಯ ಮೇಲೆ ಅಲ್ಲದೆ ಎತ್ತಿನಮೇಲೆ ಇಟ್ಟುಕೊಂಡು 15, ಇಲ್ಲವೆ 20 ತಲೆಮಾರುಗಳ ವಂಶಾವಳಿ ಇತಿಹಾಸವನ್ನು ಸರಾಗವಾಗಿ ಹಾಡುವ ಇವರು ಭೂತ ಮತ್ತು ವರ್ತಮಾನ ಕಾಲಗಳ ಕೊಂಡಿಗಳಂತೆ, ಒಂದು ಕುಟುಂಬದ ಜಾತಿ, ನೆಲೆ, ಜನನ ಮರಣ, ಮದುವೆ, ವಲಸೆ, ಕುಲದೈವ, ಅವರ ಧೈರ್ಯ, ಸಾಹಸ, ಧಾನ ಹೀಗೆ ಪ್ರತಿಯೊಂದನ್ನು ಅವರ ಕುಟುಂಬದ ಸರ್ವವಿವರಗಳು ಮತ್ತು ಅವುಗಳಿಗೆ ಸಂಬಂಧಿಸಿದಂತೆ ವಂಶವೃಕ್ಷಗಳ ದಾಖಲೆಗಳನ್ನು ಹೇಳುವ ಕಾಯಕ ಹೆಳವರದು.

---

[4] Census of India, General Reports Part-1 Govt. of India, New Delhi, 1981, P-360.)

[5] ಮರಿಗೆಪ್ಪ, ಅಲ್ಲಿಯಸ್ ಸುಂದರಂ, ಸ.ಜಿ. ರಮೇಶ್, ದಕ್ಷಿಣ ಭಾರತೀಯ ಜಾನಪದಕೋಶ, ಸಂಪುಟ–2, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, 2011, ಪುಟ–92.)

**ಹೆಳವರ ಮೂಲ ಮತ್ತು ಪರಂಪರೆ**

ಹೆಳವರ ಮೂಲ ಆಂಧ್ರಪ್ರದೇಶದ ಶ್ರೀಶೈಲಂನಿಂದ ವಲಸೆ ಬಂದು ಉನ್ನತ ಜಾತಿ–ಜನಾಂಗಗಳ ಬಗ್ಗೆ ಹಾಡಿ, ಹೊಗಳಿ ವಂಶಾವಳಿಯನ್ನು ಹೇಳುವಂತಹ ವೃತ್ತಿಯನ್ನಾಗಿಸಿಕೊಂಡ ಇವರ ಹೆಳವ' ಎಂಬ ಶಬ್ದವು ಅವರ ಮೂಲಪುರುಷ "ಕುಂಟ/ ಕಾಲು ಇಲ್ಲದವನು/ಊನದೇಹದವನಾಗಿ ಅವನು ಭಿಕ್ಷೆ ಬೇಡುತ್ತಾ ಬದುಕಿದ್ದರಿಂದ ಅವನ ಸಂತತಿ ಮುಂದೆ ಹೆಳವ ಸಮುದಾಯವಾಗಿ ರೂಪಗೊಂಡಿತು. ಇದರ ಬಗ್ಗೆ ರೆವರೆಂಟ್ ಕಿಟ್ಟಲ್ ಶಬ್ದಕೋಶದಲ್ಲಿ ಹೆಳವರ ಕುರಿತು a lame man a cripple ಅಂದರೆ ಕಾಲಿಲ್ಲದವನು ಎಂದು ಉಲ್ಲೇಖಿಸಿದ್ದಾರೆ.[6] ಮತ್ತೊಂದರ್ಥದಲ್ಲಿ 'ಹೆಳವ' ಎಂಬ ಪದವು 'ಹೇಳುವವರು ಎಂಬ ಪದದಿಂದ ಬಂದಿದೆ ಎಂಬುದು ಹಲವರ ಚರ್ಚೆ. ಜಾನಪದ ಲೌಖಿಕ ವೃತ್ತಿಗಾಯಕ ವರ್ಗಕ್ಕೆ ಸೇರುವ ಇವರು ಇವರ ಬಗ್ಗೆ ಕೆ.ಎಸ್.ಸಿಂಗ್ ರವರು ತಮ್ಮ 'ಇಂಡಿಯಾಸ್ ಕಮ್ಯೂನಿಟಿಸ್' ಗ್ರಂಥದಲ್ಲಿ ಹೆಳವ ಎಂಬ ಕರ್ನಾಟಕದ ಈ ಸಮುದಾಯವನ್ನು ಅಂಧ್ರ ಪ್ರದೇಶದಲ್ಲಿ 'ಪಿಚ್ಚಗುಂಟ' ('ಪಿಚ್ಚುಕ'ಎಂದರೆ'ಭಿಕ್ಷೆ', 'ಗಂಟಲು' ಎಂದರೆ 'ಗಂಟೆ' ಎಂದು 'ಭಿಕ್ಷಾಗಂಟೆಯನ್ನು ಹಿಡಿದುಬರುವವರು) ಎಂದು. ಮಹಾರಾಷ್ಟ್ರದಲ್ಲಿ ಹೆಳ್ವಿಗಳು' ಎಂದು ಕರೆಯಲಾಗಿದೆ. ಇದರ ಜೊತೆಗೆ ಇವರನ್ನು 'ಮಲ್ಲಬತ್ಲು''[7] ಎಂದು ಕರೆಯುತ್ತಾರೆ.

ಹೆಳವರ ಮೂಲ ನೆಲೆ ಆಂಧ್ರವಾಗಿದ್ದು ಕಾಲಾನಂತರದಲ್ಲಿ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ವಿಜಯನಗರ ಅರಸರ ಕಾಲದಲ್ಲಿ ಹೆಳವರು ಹಂಪಿಗೆ ಬಂದರು. ಇವರು ತೆಲುಗು ಮಾತನಾಡುವ ಜನರಾಗಿದ್ದು, ಇವರು ಅರಸರ ವಂಶಾವಳಿಯ ಪರಂಪರೆಯನ್ನು ಹೊಗಳಿ, ಮನರಂಜಿಸಿ ಅವರಿಂದ ಕಾಣಿಕೆಗಳನ್ನು ಪಡೆಯುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಅರಸರ ಅವನತಿ ನಂತರ ಅಲ್ಲಿನ ಸುಲ್ತಾನನ ಉಪಟಳದಿಂದ ಹಂಪಿಯನ್ನು ಬಿಟ್ಟು ಬೇರೆ ಪ್ರದೇಶಗಳಿಗೆ ಚದುರಿ ಹೊದರು.[8]

ಹೀಗೆ ಕರ್ನಾಟಕದಲ್ಲಿ ವಾಸಿಸುತ್ತಿರುವ ಹೆಳವರು ಮೂಲತಃ ಆಂಧ್ರಪ್ರದೇಶದ 'ಪಿಚ್ಚಿಗುಂಟಲ' ಜಾತಿಗೆ ಸೇರಿದವರಾಗಿದ್ದು, ಪ್ರಸ್ತುತ ಅಂಧ್ರದಲ್ಲಿ ಇವರನ್ನು 1995 ರಿಂದ ಪಿಚ್ಚ ಗುಂಟಲ ಎಂಬ ಹೆಸರಿಗೆ ಬದಲಾಗಿ, 'ವಂಶರಾಜಲು' ಎಂದು ಕರೆಯಲಾಗುತ್ತಿದ್ದಾರೆ. ಇವರನ್ನು ಒಟ್ಟಾರೆ ವಿವಿಧ ಪ್ರದೇಶಗಳಲ್ಲಿ ಹೆಳವ, ಹೆಳವರು. ಹೆಳವಯ್ಯ, ಹೆಳವಮಲ್ಲರು, ನಂದಿವಾಳ್ಳು, ಮಲ್ಲಬತ್ಲುಗಳು, ಹೆಳ್ವಿಗಳು, ವಂಶರಾಜಲು, ಪಿಚ್ಚಕುಂಟಲ, ಪಿಚ್ಚಿಗುಂಟ, ಒಕ್ಕಾಲಬೃಂಗಿ ಗಳು, ಹೀಗೆ ವಿಭಿನ್ನ ಹೆಸರುಗಳಿಂದ ಕರೆಯುತ್ತಾರೆ.

---

[6] ರವರೆಂಟ್ ಕಿಟ್ಟಲ್, ಕನ್ನಡ ಇಂಗ್ಲಿಷ್ ಡಿಕ್ಷನರಿ, ಪುಟ ಸಂಖ್ಯೆ 1683

[7] ಇವರ ಮೂಲ ಪುರುಷ ಆಂಧ್ರ ಪ್ರದೇಶದ ಗುರು ಮಲ್ಲಿಕಾರ್ಜುನನ ಅಶಿರ್ವಾದವನ್ನು ಪಡೆದು ಬಂದವನಾಗಿದ್ದರಿಂದ) ಎಂದು ಸಹ ಕರೆಯುತ್ತಾರೆ.

[8] ಪುರುಷೋತ್ತಮ ಬಿಳಿಮಲೆ, ಚೆಲುವರಾಜು, ಹಂಪಿ ಜಾನಪದ, ಜಾನಪದ ಅಧ್ಯಯನ ಮಾಲೆ ಒಂದು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996, ಪುಟ ಸಂಖ್ಯೆ 112.)

**ಹೆಳವರ ಭಾಷೆ**

ಇವರ ಮನೆಮಾತು ತೆಲುಗಾದರು. ಕರ್ನಾಟಕದಲ್ಲಿ ಇವರ ಕಾವ್ಯದ ಭಾಷೆ ಹಾಗೂ ವ್ಯವಹಾರಕ್ಕೂ ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ವಂಶಾವಳಿ ದಾಖಲೆಗಳನ್ನು ಬರೆಯುತ್ತಾರೆ. ಆದರೆ ಕೆಲವೊಂದು ಗ್ರಾಮೀಣ ಭಾಗಗಳಲ್ಲಿ ಹೆಳವರನ್ನು "ಪಿಚ್ಚಗುಂಟಲು" ಎಂಬ ಹೆಸರಿನಿಂದ ಕೀಳಾಗಿ ಅವಹೇಳನಕಾರಿಯಾಗಿ ವಿಡಂಬನಾತ್ಮಕವಾಗಿ ಕರೆಯುತ್ತಾರೆ. ಪಿಚ್ಚಗುಂಟಲು ಜಾತಿಯು ಸಹ ಹಿಂದುಳಿದ ಬುಡಕಟ್ಟುಗಳ ಅಲೆಮಾರಿ ಅರೆ ಅಲೆಮಾರಿ ಪಟ್ಟಿಯಲ್ಲಿ ಪ್ರವರ್ಗ ಒಂದರಲ್ಲಿ ಬರುವಂತಹ ಜನಾಂಗವು ಆಗಿದೆ.[9]

ಹೀಗೆ ಅನಾದಿ ಕಾಲದಿಂದಲೂ ಕುಟುಂಬದ ವಂಶಾವಳಿ ಇತಿಹಾಸವನ್ನು ಸಂಗ್ರಹಿಸಿ, ಚರಿತ್ರೆ ರಚನೆಗೆ ನೆರವು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜಕ್ಕೆ ಹೆಳವರು ಸಾಂಸ್ಕೃತಿಕ ಮಾಧ್ಯಮವಾಗಿ ಹೊರಹೊಮ್ಮಿದ್ದಾರೆ."[10]

**ಹೆಳವರ ಐತಿಹ್ಯಗಳು.**

ಚರಿತ್ರೆಯಲ್ಲಿನ ಐತಿಹ್ಯಗಳು ಒಂದು ರೀತಿಯಲ್ಲಿ ಪುರಾಣ ಕಥೆಗಳಿಗೆ ಸಂಬಂಧಿಸಿದಂತೆ ಇರುವ ಸಂಗ್ರಹವಾಗಿದ್ದು ಇವು ನಮ್ಮ ನಾಡಿನಲ್ಲಿ ಇರುವ ಮಾಸ್ತಿ ಕಲ್ಲು, ವೀರಕಲ್ಲು, ಶಾಸನ ಕಲ್ಲು, ಕೋಟೆ, ಬುರ್ಜುಗಳು, ಇವುಗಳ ಒಂದೊಂದು ಕಲ್ಲುಗಳು ಒಂದೊಂದು ಐತಿಹ್ಯಗಳಿಂದ ಇತಿಹಾಸದ ಪುಟಗಳಲ್ಲಿ ಎಷ್ಟೋ ಚರಿತ್ರಿಕಾಂಶಗಳು ನಮಗೆ ಸಿಗುತ್ತವೆ.[11] ಮತ್ತು ಈ ಸಮುದಾಯಗಳಿಗೆ ಸಂಬಂಧಿಸಿದಂತೆ ಜನಪದ ಕಲಾವಿದರಾಗಿ ತಮ್ಮ ಎಷ್ಟೋ ಸಂಪ್ರದಾಯ, ಆಚರಣೆ, ವಿಚಾರ, ನಂಬಿಕೆಗಳ ತಳಹದಿಯಾಗಿ ಪ್ರತಿಯೊಂದು ಕುಲ ಮತ್ತು ಜಾತಿ ಉಗಮವನ್ನು ಹೇಳುವ ಐತಿಹ್ಯ ಮತ್ತು ಪುರಾಣಗಳು ಅವರಲ್ಲಿನ ವಿಶಿಷ್ಟ ಐತಿಹ್ಯ ಕಥೆಗಳು ಅವರ ಜಾತಿ ಅಥವಾ ಜನಾಂಗವನ್ನು ಕುರಿತು ಇತರ ಜಾತಿ ಅಥವಾ ಜನಾಂಗದವರು ಅವರು ಕಟ್ಟಿದ ಕಥೆಗಳು ಈ ವಿವರಗಳು ನಮ್ಮ ಇತಿಹಾಸದ ಯಾವುದೋ ಒಂದು ಕಾಲಘಟ್ಟದಲ್ಲಿದ್ದ ಆಯಾ ಜಾತಿಗಿದ್ದ ಸ್ಥಾನಮಾನ ಸ್ಥಿತಿಗತಿ ಹಾಗೂ ಸ್ವರೂಪಗಳ ಬಗ್ಗೆ ಬೆಳಕು ಚೆಲ್ಲುತ್ತದೆ.[12]

ಹೀಗೆ ಕೆಲವು ಸಮುದಾಯಗಳ ಬಗ್ಗೆ ಅವರ ಊರು, ಕೇರಿ. ಸ್ಥಳ ಹಾಗೂ ಭೌಗೋಳಿಕ ವೈಶಿಷ್ಟ ಗಳಿಗೆ ಸಂಬಂಧಿಸಿದಂತೆ ಕಥೆ ಮತ್ತು ಐತಿಹ್ಯಗಳನ್ನು ದಾಖಲಿಸಲಾಗಿದೆ.

---

[9] ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ 3, ಸೂರ್ಯನಾಥ್ ,ಯು, ಕಾಮತ್, ಕರ್ನಾಟಕ ರಾಜ್ಯ ಸರ್ಕಾರ ,ಬೆಂಗಳೂರು,1984, ಪುಟ ಸಂಖ್ಯೆ, 230.)

[10] ಎಚ್ ಟಿ ಪೋತೇ, ಸಂಸ್ಕೃತಿ ಸಂಕ್ರಮಣ, ಕುಟುಂಬ ಪ್ರಕಾಶನ, ಗುಲ್ಬರ್ಗ, 2007, ಪುಟ ಸಂಖ್ಯೆ 8

[11] ವೀರಣ್ಣ ದಂಡೆ, ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2018, ಪುಟ ಸಂಖ್ಯೆ 67.

[12] ಕೆ.ಆರ್. ಸಂಧ್ಯಾ ರೆಡ್ಡಿ, ಜಾನಪದ ಪರಿಶೀಲನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006, ಪುಟ ಸಂಖ್ಯೆ 26.

ಭಾರತದಂತಹ ಒಂದು ದೇಶದಲ್ಲಿ ಅಥವಾ ಕರ್ನಾಟಕದಂತಹ ರಾಜ್ಯದಲ್ಲಿ ಪ್ರತಿಯೊಂದು ವರ್ಗ, ಜಾತಿ, ಮತ್ತು ಸಮುದಾಯಗಳು ಅವರದ್ದೇ ಆದ ಲೋಕದೃಷ್ಟಿಯನ್ನು ತಮ್ಮ ಪುರಾಣಗಳ ಮೂಲಕ ಅಭಿವ್ಯಕ್ತಿಸಿವೆ.[13]

ಹೇಗೆ ಹೆಳವರು ಒಂದು ರೀತಿಯಲ್ಲಿ ಪ್ರಾಚೀನ ಕಾಲದಲ್ಲಿ ಹೇಗೆ ರಾಜರುಗಳಿಗೆ ಸಲಹೆಗಾರರಂತೆ ಇದ್ದುಕೊಂಡು ಅವರ ಪೂರ್ವರ ಇತಿಹಾಸವನ್ನು ಹೇಳುತ್ತಾ, ಹಿಂದಿನ ರಾಜರುಗಳ ಯೋಜನೆಗಳನ್ನು ಮುಂದಿನ ರಾಜರುಗಳಿಗೆ ತಿಳಿಯಪಡಿಸುತ್ತಿದ್ದ ಮತ್ತು ರಾಜವಂಶದ ವೃತ್ತಾಂತವನ್ನು ಸಂಗ್ರಹಿಸುತ್ತಿದ್ದ ಒಂದು ವರ್ಗದಂತೆ ಹೆಳವರು ಗತಕಾಲದ ಮತ್ತು ಗ್ರಾಮೀಣ ಮನೆತನಗಳ ಆ ಅವಧಿಯಲ್ಲಿನ ತನ್ನ ಪೂರ್ವಜನರ ಸಾಧನೆಯ ಬಗ್ಗೆ, ಸಾಮಾಜಿಕ ವ್ಯವಸ್ಥೆಯ ಬಗ್ಗೆ, ಸಂಪರ್ಕ ಸೇತುವೆಗಳಂತೆ, ರಂಜಕರಾಗಿ, ಕಲಾವಿದರಾಗಿ, ಗ್ರಾಮೀಣ ಇತಿಹಾಸ ಸಂರಕ್ಷಕರಾಗಿ, ಮೌಖಿಕಚರಿತ್ರೆಯ ರಚನಕಾರರಾಗಿ ಇತಿಹಾಸದ ಪುಟಗಳಲ್ಲಿ ಕಾಣಸಿಗುತ್ತಾರೆ.

The Mysore tribes and cast volume no 3, ರಲ್ಲಿ ಕೆ .ಅನಂತ ಕೃಷ್ಣ ಅವರು ಹೆಳವರ ಬಗ್ಗೆ ಹೇಳುತ್ತಾ ಒಕ್ಕಲಿಗನೊಬ್ಬನಿಗೆ 7 ಜನ ಮಕ್ಕಳಿದ್ದರು .ಅವರಲ್ಲಿ ಅತೀ ಕಿರಿಯವನು ಕುಂಟನಾಗಿದ್ದ ಎಂದು ಉಲ್ಲೇಖಿಸಿದ್ದಾರೆ. ಡಾ. ಚಂದ್ರಶೇಖರ್ ಕಂಬಾರರು ಹೇಳಿರುವಂತೆ ಹೆಳವರು ತಾವು ಒಕ್ಕಲಿಗರಲ್ಲಿ ಒಂದು ಜಾತಿ ಎಂದು ತಮ್ಮ ಕನ್ನಡ ಜಾನಪದ ವಿಶ್ವಕೋಶ ಸಂಪುಟ ಒಂದರಲ್ಲಿ ತಿಳಿಸಿದ್ದಾರೆ.[14]

ಹೀಗೆ ಕಂಬಾರರ ಸಂಪುಟ ಎರಡರಲ್ಲೂ ಒಕ್ಕಲಿಗರ ಹಲವಾರು ವರ್ಗಗಳಲ್ಲಿ ಹೆಳವರದು ಒಂದು ವರ್ಗ ಎಂದಿದ್ದಾರೆ. ಹೀಗೆ ಹೆಳವರ ಐತಿಹ್ಯಗಳ ಬಗ್ಗೆ ಕುರಿತು ಎಚ್ ಎಲ್ ನಾಗೇಗೌಡರು ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಒಂದುವರೆ ದಶಕದಷ್ಟು ಕ್ಷೇತ್ರಕಾರ್ಯ ಮಾಡಿ ಅವರ ಮೂಲ, ಪುರಾಣ, ತೆಲುಗಿನ ಹೆಳವರು, ಕಲ್ಯಾಣ ಕ್ರಾಂತಿಯ ಬಸವಣ್ಣ ಕಾಲದ ಹೆಳವರು, ಶ್ರೀಶೈಲ ಸಂಬಂಧ, ಹೆಳವರ ಕಡತಗಳು, ವಾದ್ಯಗಳು, ಅವರ ದೇವರುಗಳು ದಿಂಡರುಗಳು, ಮರಣ, ಬಸವಿ ಪದ್ಧತಿ, ಭಾಷೆ ಮುಂತಾದ ವಿಷಯಗಳನ್ನು ವಿವರಿಸಿದ್ದಾರೆ.

11 ಮತ್ತು 12ನೇ ಶತಮಾನದ ಬಸವಣ್ಣನ ಕಾಲದಲ್ಲಿ ಕಲ್ಯಾಣದಲ್ಲಿ ವಾರ್ತೆಗಳನ್ನು ಮನೆಗಳಿಗೆ ಮುಟ್ಟಿಸುವ ಕಾರ್ಯ ಹೆಳವರು ಮಾಡುತ್ತಿದ್ದರು ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಒಕ್ಕಲು ಗೌಡನೊಬ್ಬನಿಗೆ ಏಳು ಜನ ಗಂಡು ಮಕ್ಕಳಿದ್ದರು ಅವರಲ್ಲಿ ಅತಿ ಕಿರಿಯವನು ಹೆಳವನಾಗಿದ್ದ ಅಣ್ಣ ತಮ್ಮಂದಿರ ಎಲ್ಲರೂ ತಮ್ಮ ಆಸ್ತಿಯನ್ನು ಹಂಚಿಕೊಂಡು ಈತನಿಗೆ ಏನು ಉಳಿಸಲಿಲ್ಲ ಹೆಳವನ ತಾಯಿಗೆ ತನ್ನ ಮಗನ ಭವಿಷ್ಯದ ಬಗ್ಗೆ ಬಹಳ ಆತಂಕವಿತ್ತು ಆಕೆ ಕಲ್ಯಾಣಕ್ಕೆ ಹೋಗಿ ಬಸವಣ್ಣನಿಗೆ ಅವನನ್ನು ಒಪ್ಪಿಸಿದರು ಒಂದು ದಿನ ಹೆಳವನು ಬಸವಣ್ಣನಿಗೆ ತನಗೂ ಒಂದು ಕಾಯಕವನ್ನು ಕಲ್ಪಿಸಿಕೊಡಲು

[13] ಹಿ. ಚೀ.ಬೋರಲಿಂಗಯ್ಯ ಎಂ, ಬೈರೇಗೌಡ, ಒಂದು ಬುಡಕಟ್ಟಿನ ಲೋಕದೃಷ್ಟಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2011, ಪುಟ ಸಂಖ್ಯೆ 25

[14] ಕಂಬಾರ, ಚಂದ್ರಶೇಖರ್, ಕನ್ನಡ ಜನಪದ ವಿಶ್ವಕೋಶ ಸಂಪುಟ 1, 1985, ಪುಟ ಸಂಖ್ಯೆ 420.

ಹೇಳಿದನು. ಆಗ ಅವರು ಯೋಚಿಸಿ ಅವನಿಗೆ ನಂದಿ ಒಂದನ್ನು ಕೊಟ್ಟಿ ಪ್ರತಿದಿನ ಮುಂಜಾನೆ ಅರವತ್ತು ಮೂರು ಜನ ಶರಣರ ಮನೆಗೆ ಹೋಗಿ ಅವರ ಆಗುಹೋಗುಗಳನ್ನು ವಿಚಾರಿಸಿಕೊಂಡು ಬರುವಂತೆ ಹೇಳಿದರು. ಮುಂದೆ ಅವನ ಪರಂಪರೆಯವರು ಅದನ್ನೇ ವೃತ್ತಿಯಾಗಿಸಿಕೊಂಡರು ಎಂದು ತಿಳಿದು ಬರುತ್ತದೆ.[15]

(ಹೆಳವರ ಬಗ್ಗೆ ಜನ್ನ ಕವಿಯು ತನ್ನ ಅನಂತನಾಥ ಪುರಾಣದಲ್ಲಿ (ಕ್ರಿಸ್ತಶಕ ಸಾವಿರ ಇನ್ನೂರ ಮೂವತ್ತರಲ್ಲಿ) ಇವರ ಬಗ್ಗೆ ವಿವರಣೆ ಇದೆ. ಹಣೆಕಟ್ಟು ಎಂಬ ಪದ ಬಳಸುವಾಗ ಹೆಳವರ ಎತ್ತಿನ ಹಣೆಗೆ ಕಟ್ಟುವ ಅಲಂಕಾರದಂತೆ ಎಂಬ ಪದ ಬಳಕೆ ಮಾಡಿರುವುದೂ ಜನ್ನನಿಗಿಂತ ಪೂರ್ವದಲ್ಲಿ ಹೆಳವರ ಪರಂಪರೆ ಇದ್ದದ್ದನ್ನೂ ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಶಂಬಾ ಜೋಶಿಯವರು ತಮ್ಮ ಸಂಪುಟ ಎರಡರಲ್ಲಿ ಹೆಡೆಗಳು ಹೇಳುವ ಕರುನಾಡ ಕಥೆಯಲ್ಲಿ "ನಮ್ಮ ನಾಡವರ ಮನೆತನದ ಗತ ಇತಿಹಾಸವನ್ನೆಲ್ಲ ನೆನಪಿಟ್ಟು ಕಥೆ ಮಾಡಿ ಹೇಳುವ ಒಂದು ವರ್ಗವೇ ಇದೆ. ಇವರೇ ನಮ್ಮ ನಾಡಿನ ಪಾರಂಪರಾಗತವಾದ ಇತಿಹಾಸಕಾರರು, ಕಥೆಗಾರರು, ಐತಿಹಾಸಿಕ ಕಾದಂಬರಿಕಾರರು. ಇವರು ಒಂದೊಂದು ಮನೆತನಕ್ಕೂ ಕಾಲ ಕಾಲಕ್ಕೆ ಬಂದ ಅವರ ಹಿರಿಯರ ಬಿರುದಾವಳಿ ಪೂರ್ವ ಚರಿತ್ರೆಗಳನ್ನು ಚೆನ್ನಾಗಿ ಬಣ್ಣ ಬಳಿದು ಮನ ಸೆಳೆಯುವಂತೆ ಹೇಳುವವರಲ್ಲಿ ಹೆಳವರು ಗಟ್ಟಿಗರು ಅದಕ್ಕಾಗಿ ಇವರು ಉಂಬಳಿ ಮಾನ್ಯಗಳನ್ನು ಪಡೆದಿದ್ದಾರೆ ಎಂದು ಇವರ ಬಗ್ಗೆ ಉಲ್ಲೇಖಿಸಿದ್ದಾರೆ.

**ಉಪಸಂಹಾರ**

ಹೇಗೆ ಹೆಳವರ ಚಾರಿತ್ರಿಕ ಹಿನ್ನೆಲೆಯ ಇತಿಹಾಸವನ್ನು ಗಮನಿಸಿದಾಗ ಹೆಳವರು  ಸಾಮಾನ್ಯವಾಗಿ ಗ್ರಾಮೀಣ ಭಾಗದ ಪ್ರಭಾವಶಾಲಿ ಮನೆತನಗಳ ಬಗ್ಗೆ "ನಿಮ್ಮ ಕುಲವೆತ್ತಿ ಕೊಂಡಾಡುವೆವು ರಾಮೋರಾಯ" ಎಂದು ಹಾಡುತ್ತಾ ಆ ಮನೆಯವರ ಮೂಲ ಪುರುಷ, ಅವರ ಸಂತಾನ ಬೆಳೆದು ಬಂದ ಬಗೆ, ಅವರ ವಂಶಿಕರ ಸಾಹಸ, ಆ ಕುಟುಂಬದಲ್ಲಿ ಸತ್ತು ಕಳೆದು ಹೋದವರ ಹೆಸರನ್ನು ಪದಗಳಿಂದ ಹೇಳಿ ವಂಶಾವಳಿಗಳನ್ನು ಹಾಡಿ ಜನರನ್ನು ಹೊಗಳಲು ಬಂದಾಗ ಹೆಳವರು ಮೊದಲು ಆಯಾ ಒಕ್ಕಲಿನ ಕುಲಸ್ವಾಮಿಯನ್ನು ಕೊಂಡಾಡುತ್ತಾರೆ ನಂತರ ಆ ಮನೆಗೆ ಸಂಬಂಧಪಟ್ಟ ದೇವತೆಗಳ ಪಾದಗಳನ್ನು ನೆನೆಯುತ್ತಾರೆ ಹೀಗೆ ಹೇಳುತ್ತಾ ಹೋಗಿ ಅವರ ಸಾಹಸವನ್ನು ಧಾನ, ಧರ್ಮ, ದಯೆ, ವಿನಯ, ಸೌಜನ್ಯಗಳನ್ನು ವಿವರಿಸುತ್ತಾರೆ.ಜೊತೆಗೆ ಆ ವಂಶದ ಹಿರಿಯರ ಹೆಸರುಗಳನ್ನು ಅವರ ಶೌರ್ಯವನ್ನು ಹೇಳುತ್ತಾರೆ.

ಹೀಗೆ ಹೆಳವರು ಹಲವಾರು ಗ್ರಾಮಚರಿತ್ರೆಗಳ ಪಾರುಪತ್ತೆಗಾರರು.ಇವರಿಗೆ ಒಂದು ಗೊತ್ತಾದ ಹಳ್ಳಿಯ ಬಹುಪಾಲು ಕೆಲವೊಂದು ಪ್ರಭಾವಶಾಲಿ ಕುಟುಂಬಗಳ ವಂಶವೃಕ್ಷ ಹಾಗೂ ವಂಶ ಚರಿತ್ರೆಯ ವಿವರಗಳ

[15] ಪ್ರೊ. ಹೀ. ಚಿ. ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 1996, ಪುಟ ಸಂಖ್ಯೆ 129.

ಸಂಪೂರ್ಣ ಪರಿಚಯವಿರುತ್ತದೆ. ಇವು ಅವರ ನೆನಪುಗಳ ಬಂಡಾರದ ಭಾಗವಾಗಿರುತ್ತದೆ. ಮತ್ತು ತಮ್ಮಲ್ಲಿರುವ ಅಪಾರವಾದ ಮಾಹಿತಿಯನ್ನು ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ಪಡೆದಿರುತ್ತಾರೆ. ಇವರು ಪ್ರಭಾವಶಾಲಿ ಮನೆತನಗಳ ವೀರರನ್ನು ಕುರಿತು ಹಾಡುಗಳನ್ನು ಹೇಳುವುದು, ವಂಶವೃಕ್ಷದ ವಿವರಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಇವರಿಗೆ ರೂಡಿಗತವಾಗಿ ಬಂದಿದೆ. ಇವರು ವಂಶ ಚರಿತ್ರೆಗಳಲ್ಲದೆ ಕೆಲವು ಜನಪದ ಕಾವ್ಯಗಳನ್ನು ಕೂಡ ಹಾಡುತ್ತಾರೆ. ಹೀಗೆ ಒಬ್ಬಬ್ಬ ಹೆಳವನು ಕೆಲವು ಹಳ್ಳಿಗಳ ಒಕ್ಕಲುಗಳನ್ನು ತಾನು ಹಂಚಿಕೊಂಡು ತನ್ನ ಹಕ್ಕನ್ನು ವಂಶ ಪಾರಂಪರವಾಗಿ ಉಳಿಸಿಕೊಂಡು ಬಂದಿದ್ದಾರೆ.

**ಪರಾಮರ್ಶನ ಗ್ರಂಥಗಳು.**


- ಭಗವತ್ ಶರಣ ಉಪಾಧ್ಯಾಯ. (1986). *ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ.* ನವ ಕರ್ನಾಟಕ ಪ್ರಕಾಶನ.
- ಬೋರಲಿಂಗಯ್ಯ, ಹೀ.ಚಿ., ಎಂ ಬೈರೇಗೌಡ. (2011). *ಒಂದು ಬುಡಕಟ್ಟಿನ ಲೋಕದೃಷ್ಟಿ.* ಪ್ರಗತಿ ಗ್ರಾಫಿಕ್ಸ್.
- ಬೋರಲಿಂಗಯ್ಯ, ಹೀ.ಚಿ., (1996). *ಕರ್ನಾಟಕ ಜನಪದ ಕಲೆಗಳ ಕೋಶ,* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- ಚಂದ್ರಶೇಖರ ಕಂಬಾರ. (1985). *ಕನ್ನಡ ಜನಪದ ವಿಶ್ವಕೋಶ–ಸಂಪುಟ 1*
- Census of India-1981, General Reports Part–1 Govt of India, New Delhi
- ಹರಿಲಾಲ್. ಕೆ. ಪವಾರ್. (1993). *ಹೆಳವರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮುರಿಗೆಪ್ಪ, ಎ., ಆರ್‍ವೀಯಸ್ ಸುಂದರಂ., ಸ.ಚಿ.ರಮೇಶ್. (2011). ದಕ್ಷಿಣ ಭಾರತೀಯ ಜಾನಪದಕೋಶ, ಸಂಪುಟ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪುರುಷೋತ್ತಮ ಬಿಳಿಮಲೆ., ಚೆಲುವರಾಜು, (1996). *ಹಂಪಿ ಜಾನಪದ.* ಜಾನಪದ ಅಧ್ಯಯನ ಮಾಲೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಪೋತೆ, ಎಚ್.ಟಿ. (2007). ಸಂಸ್ಕೃತಿ ಸಂಕ್ರಮಣ, ಕುಟುಂಬ ಪ್ರಕಾಶನ.
- ರವರೆಂಟ್ ಕಿಟ್ಟಲ್, ಕನ್ನಡ ಇಂಗ್ಲಿಷ್ ಡಿಕ್ಷನರಿ.
- ಸೂರ್ಯನಾಥ, ಯು, ಕಾಮತ್. (1971). *ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ–3,* ,ಕರ್ನಾಟಕ ಸರ್ಕಾರ, ಸೆನ್ಸೆಸ್ ಆಫ್ ಇಂಡಿಯಾ , ಜನರಲ್ ರಿಪೋರ್ಟ್ . ಭಾಗ 1 ಎ, ಸಂಪುಟ 11,
- ಸೂರ್ಯನಾಥ್, ಯು. ಕಾಮತ್. (1984). *ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ–3,* ಕರ್ನಾಟಕ ರಾಜ್ಯ ಸರ್ಕಾರ.
- ಸಂಧ್ಯಾ ರೆಡ್ಡಿ, ಕೆ .ಆರ್. (2006). *ಜಾನಪದ ಪರಿಶೀಲನೆ.* ಕನ್ನಡ ಸಾಹಿತ್ಯ ಪರಿಷತ್ತು.
- ವೀರಣ್ಣ ದಂಡೆ. (2018). *ಜಾನಪದ.* ಕನ್ನಡ ಸಾಹಿತ್ಯ ಪರಿಷತ್ತು.